ಟಿ.ಎಂ. ಶೇಷಗಿರಿ ತುಮರಿ

ಕಲೆ: ಪ್ರವೀಣ್ ಆಚಾರ್ಯ

# ಪರೀಕ್ಷೆ

ಅವನ ಹೆಸರು ಶಂಕರನಾರಾಯಣ ಭಟ್ಟ. ಅವನ ತಂದೆ ಶಂಕರನ ಭಕ್ತ. ಈಶ್ವರ ದೇವಸ್ಥಾನದ ಅರ್ಚಕ ಕೂಡ. ಮಗನಿಗೆ ಆ ಹೆಸರೇ ಬೇಕು ಎಂಬುದು ಅವನ ಅಪೇಕ್ಷೆ. ತಾಯಿ ವಿಷ್ಣು ಭಕ್ತೆ. ನಾರಾಯಣ ಹೆಸರೇ ಮಗನಿಗೆ ಇರಲಿ ಎಂಬುದು ಅವಳ ಅಪೇಕ್ಷೆ. ಯಾರಿಗೂ ಅಸಮಾಧಾನ ಬೇಡ ಎಂದು ಹಿರಿಯರು ಮಧ್ಯಸ್ತಿಕೆ ಮಾಡಿ ಶಂಕರನಾರಾಯಣ ಎಂದು ಸೂಚಿಸಿದ್ದು, ಅದೇ ಕಾಯಂ ಆಯಿತು. ಆದರೆ, ಅಷ್ಟುದ್ದ ಕರೆಯಲು ಈಗ ಯಾರಿಗೂ ಪುರುಸೊತ್ತಿಲ್ಲ. ಅವನಿಗಿಂತ ಹಿರಿಯರು ಎಲ್ಲಾ ಅವನನ್ನು ಶಂಕ್ರಾ ಅಂತಲೇ ಕರೆಯುತ್ತಾರೆ. ಅವನಿಗಿಂತ ಕಿರಿಯರು ಶಂಕ್ರಣ್ಣ ಅಂತ ಒಂದು ಅಕ್ಷರ ಜಾಸ್ತಿ ಸೇರಿಸಿ ಕರೆಯುವುದಿದೆ. ಊರಲ್ಲಿರುವ ಒಂದೇ ಒಂದು ಈಶ್ವರ ದೇವಸ್ಥಾನಕ್ಕೆ ಅವನು ಅರ್ಚಕನಾದ್ದರಿಂದ ಎಲ್ಲರಿಗೂ ಬೇಕಾದವನು. ಅವನಾಗಿಯೇ ಇಷ್ಟಪಟ್ಟು ಈ ವೃತ್ತಿ ಮಾಡುತ್ತಿದ್ದಾನೆ ಎಂದುಕೊಳ್ಳಬೇಡಿ. ಪರಂಪರಾಗತವಾಗಿ ಅಜ್ಜ, ಅಪ್ಪನಿಂದ ಬಂದ ವೃತ್ತಿಯಾದದ್ದರಿಂದ ಅದನ್ನು ಬಿಡಲೂ ಉಪಾಯವಿಲ್ಲ.

